ನಕ್ಷತ್ರ ಪಟ

ಜನ್ನು ಪ್ರಪಂಚ

# ಕಿತ್ತಳೆ, ಬಾದಾಮಿಗಿಂತ ಲವೀನಕ್ಕನ ನಗುವೇ ಚಂದ



**ಸೌಮ್ಯ ಪ್ರಭು ಕಲ್ಯಾಣ್ಕರ್**

ಕಲೆ: ಸಂತೋಷ್ ಸಸಿಹಿತ್ಲು

ಜನ್ನು ಎಂದಿನಂತೆ ಹಾರಾಡಿಕೊಂಡು ಬರುತ್ತಿದ್ದ. ಅವನ ಕೈಗಳೇ ರೆಕ್ಕೆಗಳು. ಅದೋ ದೂರದ ಬೆಟ್ಟು ಗದ್ದೆಯಲ್ಲಿ ಅಪ್ಪನ ತಲೆ ಕಾಣುತ್ತಿದೆ, ತಲೆ ಅಂದರೆ ಈ ಪುಟಾಣಿಗೆ ಕಂಡದ್ದು ತಲೆಗೆ ಸುತ್ತಿದ್ದ ಚಿಕ್ಕ ಬೈರಾಸು. ವ್ಹಾ! ಅಪ್ಪ ನೋಡಿದ್ರೆ ಮುಗೀತು ಕಥೆ, ನಿನ್ನೆ ಬೇರೆ ಅವರ ಪೆಟ್ಟಿಗೆ ಮುಟ್ಟಿ, 'ಮಾಣಿ, ಇನ್ನೊಂದ್ಸಲ ನನ್ನ ಪೆಟ್ಟಿಗೆ ಮುಟ್ಟಿ ನೋಡು, ನಿನ್ನ ಚರ್ಮ ಸುಲಿಯದಿದ್ರೆ ನನ್ನ ಹೆಸ್ರು ಬದಲಾಯಿಸಿಕೊಳ್ತೆ' ಅಂತ ಅವ್ರು ಆರ್ಭಟಿಸಿದ್ದೂ ಆಗಿದೆ. ಇವರ ಸುದ್ದಿಗೇ ಹೋಗೋದು ಬೇಡಪ್ಪಾ ಅಂದುಕೊಂಡವನು ರೆಂಜೆ ಮರದ ಪಕ್ಕದ ಕಾಲುದಾರಿಯಲ್ಲಿ ಮೆತ್ತಗೆ ಸಾಗಿ ಮಾಯವಾದ.

ತಿಮ್ಮುವಿಗೋ ಇಂದು ಮೈಮುರಿಯುವಷ್ಟು ಕೆಲಸ. ಅಡಿಕೆ ಸಿಪ್ಪೆ ಸುಲಿಯುವಾಗಲೆಲ್ಲಾ ಅವನೂ ಅವನಪ್ಪನೊಡನೆ ಹೋಗಲೇಬೇಕಿತ್ತು. ಅವನಿಗೆ ಜನ್ನುವಿನದ್ದೇ ಧ್ಯಾನ. ಅಂತೂ ಇಂತೂ, ಅಷ್ಟೋ ಇಷ್ಟೋ ಕೆಲಸ ಮುಗಿಸಿದವನು ಅವನಪ್ಪ ವೀಳ್ಯದೆಲೆ ತಿನ್ನಲು ಹೊರಟಿದ್ದೇ ತಡ ತಿಮ್ಮು ಅಲ್ಲಿಂದ ಪರಾರಿಯಾದ. ಜನ್ನುವನ್ನು ಎಲ್ಲಾ ಕಡೆ ಹುಡುಕಿ ಕೊನೆಗೆ ಕೆರೆದಂಡೆಯ ಮೇಲಿರುವ ಕಟ್ಟೆಯವರೆಗೆ ಬಂದ. ಜನ್ನು ಅಲ್ಲೂ ಇಲ್ಲ! 'ಜನ್ನು, ಏ ಜನ್ನು, ಜನ್ನೂ.......' ಅಂತ ಬೊಬ್ಬೆ ಹಾಕಿದ್ದೇ ಬಂತು. ಸಿಳ್ಳೆ ಹಾಕಿ ಮತ್ತೊಂದು 'ಕೂ...' ಹಾಕಿದ್ದೂ ಆಯ್ತು. ಜನ್ನುವಿನ ಸುಳಿವೇ ಇಲ್ಲ. ತಿಮ್ಮು ಪ್ರಕಾರ ಅವನ ಬೊಬ್ಬೆ, ಕೂ ಗಳೆಲ್ಲಾ ಕೆರೆ, ಗದ್ದೆ, ಅಂಗಳ ಎಲ್ಲಾ ದಾಟಿ ಜನ್ನುವಿನ ಕಿವಿಗೆ ಬೀಳುತ್ತೆ ಅಂತ, ಆದರೆ ಅದೆಲ್ಲಾ ಒಂದು ಮೀಟರ್ ಪರಿಧಿಯಲ್ಲೇ ಉಳಿದಿತ್ತು!

ಪಾಪದ ಹುಡುಗ, ತನ್ನ ದೋಸ್ತಿಗೋಸ್ಕರ ಚಡಪಡಿಸಿದ. 'ಎಂಥ ಸಾವು! ಎಷ್ಟು ಹೊತ್ತು ಕಾಯೋದು, ಹೊರಡುವನಾ ಅಂಥ, ಆದ್ರೆ ತಡ ಆಗಿ ಅಂವ ಬಂದ್ರೆ? ಮತ್ತೆ ನಾನಿಲ್ಲಾದ್ರೆ